# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್ 177(145) ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರಾದ ಶ್ರೀ. ಮಹಾಂತೇಶ್ ಬುರನಾಪುರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ ಅಪ್ಪಣೆ ಮೇರೆಗೆ ದಿನಾಂಕ:01/10/2022ರ ಶನಿವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

ಹಾಜರಿದ್ದವರು:–

1. ಶ್ರೀ. ಮಹಾಂತೇಶ್ ಬುರನಾಪುರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ.
2. ಶ್ರೀ. ವಿಜಯಕುಮಾರ್ ಕೆ.ಎಸ್. ಸಹಾಯಕ ಅಭಿಯಂತರರು ವಾರ್ಡ್–177.
3. ಶ್ರೀ. ಆರ್. ಉಮಾಶಂಕರ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–177.
4. ವಾರ್ಡಿನ ಸ್ಥಳೀಯರಾದ ಶ್ರೀಮತಿ. ರೇಖಾ ಶಂಖರ್.
5. ವಾರ್ಡಿನ ಸ್ಥಳೀಯರಾದ ಶ್ರೀಮತಿ. ಪಿ.ಜಿ. ಜ್ಯೋತಿ ಸಚ್ಚಿದಾನಂದ.
6. ವಾರ್ಡಿನ ಸ್ಥಳೀಯರಾದ ಶ್ರೀ. ಕಿಶೋರ್ ಟಿ.ಎಸ್.
7. ವಾರ್ಡಿನ ಸ್ಥಳೀಯರಾದ ಶ್ರೀ. ಎ. ಸಂದೀಪ್.
8. ವಾರ್ಡಿನ ಸ್ಥಳೀಯರಾದ ಶ್ರೀ. ಮಲ್ಲಿಕಾರ್ಜುನ ಕೆ.ಹೆಚ್.
9. ವಾರ್ಡಿನ ಸ್ಥಳೀಯರಾದ ಹೆಚ್. ಪ್ರಭಾಕರ.

ಸಭೆಗೆ ಗೈರು ಹಾಜರಾದ ಇಲಾಖೆಗಳು:–

1. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
2. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ & ಸಂಚಾರ ವಾರ್ಡ್ 177.
3. ಸಹಾಯಕ ಇಂಜಿನಿಯರ್ (ಬೆಸ್ಕಾಂ).
4. ಅರಣ್ಯ ಇಲಾಖೆಯ ಅಧಿಕಾರಿಗಳು.
5. ತೋಟಗಾರಿಕೆ ಇಲಾಖೆ, ಮೇಲ್ವಿಚಾರಕರು ವಾರ್ಡ್ 177.
6. ಸಹಾಯಕ ಇಂಜಿನಿಯರ್ (BWSSB).



Scanned with CamScanner

7. ಸ.ಕಾ.ನಿ. ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ, ಬಿಬಿಎಂಪಿ ಕೇಂದ್ರ ಕಛೇರಿ.
8. ಸ.ಕಾ.ನಿ. ಅಭಿಯಂತರರು, ಯೋಜನೆ–ಕೇಂದ್ರ, ಬಿಬಿಎಂಪಿ ಕೇಂದ್ರ ಕಛೇರಿ.
9. ಸ.ಕಾ.ನಿ. ಅಭಿಯಂತರರು, ಬೃಹತ್ ನೀರುಗಾಲುವೆ ಬಿಬಿಎಂಪಿ ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡ.

1. ವಾರ್ಡಿನ ಸ್ಥಳೀಯರು ಮಾತನಾಡಿ ಬಿಟಿಎಸ್ ರಸ್ತೆಯಲ್ಲಿ 8ನೇ ಮತ್ತು 9ನೇ ಅಡ್ಡರಸ್ತೆಯ ಮಧ್ಯದಲ್ಲಿ ಚರಂಡಿ ಚಪ್ಪಡಿ ಹಾಳಾಗಿದ್ದು, ಸರಿಪಡಿಸುವಂತೆ ಕೋರಿರುತ್ತಾರೆ.

2. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 6ನೇ ಮುಖ್ಯರಸ್ತೆಯಲ್ಲಿ ಹರಲಕ್ಷ್ಮಿ ಥಿಯೇಟರ್ ಹತ್ತಿರ ಕಸವನ್ನು ತೆರವುಗೊಳಿಸಲು ಕೋರಿರುತ್ತಾರೆ.

3. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್‌ನ ಪೋಲೀಸ್ ಠಾಣೆ ಹಿಂಭಾಗದಲ್ಲಿ ಗುಂಡಿಯನ್ನು ಮುಚ್ಚಲು ಕೋರಿರುತ್ತಾರೆ.

4. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್‌ನಲ್ಲಿ ಸಿ.ಸಿ. ಕ್ಯಾಮರಾವನ್ನು ಅಳವಡಿಸಲು ಕೋರಿರುತ್ತಾರೆ.

5. ವಾರ್ಡಿನ ಸ್ಥಳೀಯರು ಮಾತನಾಡಿ 13ನೇ "ಎ" ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳನ್ನು ರಸ್ತೆ ಮಟ್ಟಕ್ಕೆ ನಿರ್ಮಿಸಲು ಕೋರಿರುತ್ತಾರೆ.

6. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ ವ್ಯಾಪ್ತಿಯಲ್ಲಿ ಕತ್ತರಿಸಿ ಹಾಕಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

7. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್‌ನಲ್ಲಿರುವ ಹೂವಿನ ಅಂಗಡಿಗಳ ವಿರುದ್ಧ ಆರೋಗ್ಯ ಇಲಾಖೆಯಿಂದ ತೆಗೆದುಕೊಂಡಿರುವ ಕ್ರಮದ ಬಗ್ಗೆ ತಿಳಿಸಲು ಕೋರಿರುತ್ತಾರೆ.

8. ವಾರ್ಡಿನ ಸ್ಥಳೀಯರು ಮಾತನಾಡಿ ಬಿಟಿಎಸ್ ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಹಾಗೂ ಓ.ಎಫ್.ಸಿ ಅವರು ಮಾಡಿರುವಂತಹ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ.

9. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 10ನೇ ಅಡ್ಡರಸ್ತೆಯಲ್ಲಿರುವ ಐತಿಹಾಸಿಕ ಹೊಂಬೇಗೌಡ ಆಟದ ಮೈದಾನದಲ್ಲಿ (ರೆಡ್‌ಫೀಲ್ಡ್) ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಕೋರಿದರು.



Scanned with CamScanner

10. ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯ ನಡವಳಿಗಳನ್ನು ಸಂಬಂಧಪಟ್ಟ ಎಲ್ಲಾ ಇಲಾಖೆಯವರ ಕಛೇರಿಗೆ ತಲುಪಿಸಲು ಸೂಚನೆ ನೀಡಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 177(145)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 177(145)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner